144ನೇ ಅಧಿವೇಶನ – 2021
ನಿಯಮ – 72
ಕ್ರಮ – 133
ಕಂಪ್ಯೂಟರ್

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಿ.ಕೆ. ಹರಿಪ್ರಸಾದ್ ಇವರು ಸರ್ ಸಿದ್ದಪ್ಪ ಕಂಬಳಿ" ರವರ ಹೆಸರನ್ನು ಹುಬ್ಬಳ್ಳಿ-ಧಾರವಾಡ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯಕ್ಕೆ ಇಡುವ ಕುರಿತು ನಿಯಮ 72 ರಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

ಸರ್. ಸಿದ್ದಪ್ಪ ಕಂಬಳಿ ಪ್ರತಿಷ್ಠಾನ (ರಿ), ಧಾರವಾಡ ಇವರ ಹೆಸರನ್ನು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯಕ್ಕೆ ನಾಮಕರಣ ಮಾಡುವ ಸಂಬಂಧ ಸರ್ಕಾರದಲ್ಲಿ ಸ್ವೀಕೃತವಾದ ವಿವಿಧ ಗಣ್ಯರ ಮನವಿಗಳ ಕುರಿತು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಅಭಿಪ್ರಾಯವನ್ನು ಕೋರಲಾಗಿ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು ವಿವರವಾದ ಅಭಿಪ್ರಾಯವುಳ್ಳ ವರದಿಯನ್ನು ಸಲ್ಲಿಸುತ್ತಾ (ಪ್ರತಿಲಗತ್ತಿಸಿದೆ), ಘನಸರ್ಕಾರವು ಪ್ರಸ್ತಾಪಿತ ಮಹನೀಯರ ಹೆಸರನ್ನು "ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ" ಎಂಬುವುದಕ್ಕೆ ಬದಲಿಯಾಗಿ ಇಡುವ ವಿಚಾರವನ್ನು ಕೈಬಿಡಬೇಕೆಂದು ಮತ್ತು ಸರ್ ಸಿದ್ದಪ್ಪ ಕಂಬಳಿಯವರನ್ನು ಸ್ಮರಿಸುವ ಇತರೆ ಯಾವುದೇ ಕ್ರಮವನ್ನು ಕೈಗೊಳ್ಳಬೇಕೆಂಬ ಅಭಿಪ್ರಾಯವನ್ನು ನೀಡಿರುತ್ತಾರೆ. ಪ್ರಸ್ತುತ ಸದರಿ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಸಂಖ್ಯೆ: ಲಾ - ಹೆಚ್‌ಆರ್‌ಎಂ/128/2021

(ಜೆ.ಸಿ. ಮಾಧುಸ್ವಾಮಿ)
ಕಾನೂನು ಹಾಗೂ ಸಂಸದೀಯ ವ್ಯವಹಾರಗಳು
ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ
KARNATAKA STATE LAW UNIVERSITY
NAVANAGAR, HUBBALLI 580025

Prof. (Dr.) P. Ishwara Bhat
VICE-CHANCELLOR

Tel: 0836-2222079
Fax : 0836-2222261
Mb: +917595080898

Email: ksluvc@karnataka.gov.in, ishbhatp@gmail.com Website: www.kslu.ac.in

ಸಂಖ್ಯೆ: ಕರಾಕಾವಿ/ಕುಪಸ/2020-21/1063 ದಿನಾಂಕ: 08.10.2021

ಗೆ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಾನೂನು ಇಲಾಖೆ,
ಕರ್ನಾಟಕ ಸರ್ಕಾರ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ವ್ಯಾಪ್ತಿಯಲ್ಲಿ ಸ್ಥಾಪಿಸಲಾದ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯಕ್ಕೆ ಪ್ರಾತ:ಸ್ಮರಣೀಯರಾದ "ಸರ್ ಸಿದ್ದಪ್ಪ ಕಂಬಳಿ" ಕಾನೂನು ವಿಶ್ವವಿದ್ಯಾಲಯ ಎಂದು ನಾಮಕರಣ ಮಾಡುವ ಕುರಿತು.
ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ: ಲಾ-ಕೆಎಲ್ಎಮ್/102/2021 ದಿನಾಂಕ: 23.09.2021.

3214745
2/11/21

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು 2009ರಲ್ಲಿ ಸ್ಥಾಪನೆಯಾದ ಹಿನ್ನಲೆ ಮತ್ತು ವಿಶ್ವವಿದ್ಯಾಲಯಕ್ಕೆ 'ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ' ಎಂದು ಹೆಸರಿಟ್ಟಿರುವುದರ ಬಗೆಗೆ ವಿಶ್ವವಿದ್ಯಾಲಯದ ಪ್ರಾರಂಭದ ಕುಲಪತಿಯವರಾದ ಪ್ರೊ. ಜೆ. ಎಸ್. ಪಾಟೀಲ ಮತ್ತು ಶಿಕ್ಷಕ ವೃಂದದೊಂದಿಗೆ ಸಮಾಲೋಚಿಸಿ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಸ್ಥಾಪನೆಯ ವರದಿಯನ್ನು ಗಮನಿಸಿಕೊಂಡು ಮತ್ತು ಸರ್ ಸಿದ್ದಪ್ಪ ಕಂಬಳಿಯವರ ಹೆಸರನ್ನು ವಿಶ್ವವಿದ್ಯಾಲಯಕ್ಕೆ ಇಡಲು ಪ್ರಸ್ತಾಪಿಸುವ ಎಲ್ಲ ಮನವಿ, ಸೂಚನೆ ಹಾಗೂ ಪ್ರಕಟಣೆಗಳನ್ನು ಪರಿಶೀಲಿಸಿ ಈ ಕೆಳಗಿನ ವರದಿಯನ್ನು ಈ ಮೂಲಕ ಸಲ್ಲಿಸುತ್ತಿದ್ದೇನೆ.

9/11/21
S.O (H.R)
4/11/2021

1. 2009ರ ಮೊದಲು ಕಾನೂನು ಶಿಕ್ಷಣವು ಮೈಸೂರು, ಬೆಂಗಳೂರು, ಮಂಗಳೂರು, ಗುಲಬರ್ಗ, ಕುವೆಂಪು ವಿಶ್ವವಿದ್ಯಾಲಯಗಳ ಶೈಕ್ಷಣಿಕ ಆಡಳಿತಕ್ಕೆ ಒಳಪಟ್ಟಿದ್ದು 2009ರ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಅಧಿನಿಯಮದ ಮೂಲಕ ಪೂರ್ಣ ಪ್ರಮಾಣದಲ್ಲಿ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯಕ್ಕೆ ತರಲಾಯಿತು. ರಾಜ್ಯ ವ್ಯಾಪ್ತಿಯ ಈ ಶೈಕ್ಷಣಿಕ ವೇದಿಕೆಗೆ ರಾಜ್ಯದ ಹೆಸರನ್ನು ನೀಡಲಾಗಿದೆ.

2. ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಅಧಿನಿಯಮ 2009ರ ಪ್ರಸ್ತಾವನೆಯಲ್ಲಿ ವಿಶ್ವವಿದ್ಯಾಲಯದ ಉದ್ದೇಶಗಳಲ್ಲಿ "to inculcate among citizens a meaningful concern for the law in a system of Parliamentay democracy in State of Karnataka" ಎಂದು ಹಾಗೂ ಕಲಂ 4(a) ಯಲ್ಲಿ "to bring about general

ದ.ಪು.ತಿ...

awareness of law in its content, context, meaning and purpose" ಎಂದು ಕೂಡಾ ಹೇಳಲಾಗಿದೆ. ಕಾನೂನು ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಸರಕಾರಕ್ಕೆ 10.05.2006ರಂದು ಸಲ್ಲಿಸಲಾದ ಸಮಗ್ರವರದಿಯಲ್ಲಿ ಇದರ ಮೂಲ ಉದ್ದೇಶಗಳನ್ನು(objectives) ಹೇಳುವಾಗ "To take initiatives to make people of Karnataka to commit themselves to the principles of social, economic and political justice and of equality and fraternity amongst themselves" ಮತ್ತು "To spread legal literacy among the people of the state and transform Karnataka into 100% legal literacy state" ಎಂದು ದಾಖಲಿಸಲಾಗಿದೆ. ಇವುಗಳೆಲ್ಲದುದರ ಒಟ್ಟು ತಾತ್ಪರ್ಯವೆಂದರೆ ಕರ್ನಾಟಕದ ಜನತೆಯ ಕಾನೂನು ಅರಿವಿಗಾಗಿ, ಕರ್ನಾಟಕಕ ಜನತೆಯ ಭಾಗವಹಿಸುವಿಕೆಯ ಮೂಲಕ ಕಾನೂನು ಶಿಕ್ಷಣದ ಕಾರ್ಯವು ನಡೆಯ ಬೇಕಿದೆ. ಕರ್ನಾಟಕ ವೆಂಬುದು ಬರಿಯ ಭೂಭಾಗವಲ್ಲ, ಅದು ಕನ್ನಡದ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದ ಒಟ್ಟು ಜನ ಸಮುದಾಯ. ಅದು ಅಸ್ಮಿತೆಯ ಸಂಕೇತ. ಆದುದರಿಂದ ಕರ್ನಾಟಕ ವೆಂಬ ಲಾಂಛನದ ಅಡಿಯಲ್ಲಿ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು ಸ್ಥಾಪನೆಗೊಂಡಿತು. ವಿಶ್ವವಿದ್ಯಾಲಯದ ಲೋಗೋದಲ್ಲಿ ಕರ್ನಾಟಕದ ಭೂಪಟಕನ್ನು ಅಳವಡಿಸಲಾಗಿದೆ.

3. 2009ರಲ್ಲಿ ಸ್ಥಾಪಿಸಲಾದ ಕಾನೂನು ವಿಶ್ವವಿದ್ಯಾಲಯಕ್ಕೆ ಯಾವ ಹೆಸರು ಇಡಬೇಕೆಂಬ ವಿಚಾರದಲ್ಲಿ ಕೆಲವು ಪ್ರಸ್ತಾಪಗಳು ಬಂದ ವಿಚಾರವನ್ನು ಪ್ರೊ. ಜೆ. ಎಸ್. ಪಾಟೀಲರು ನನ್ನೊಂದಿಗೆ ಹಂಚಿಕೊಂಡಿದ್ದಾರೆ. ಸಮಾಜದ ಒಂದು ಸಮುದಾಯದವರು ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರರ ಹೆಸರನ್ನು ಸೂಚಿಸಿದ್ದರೆಂದೂ ಸಮಾಜದ ಇನ್ನೊಂದು ವರ್ಗದವರು ಕಲ್ಯಾಣ ಕ್ರಾಂತಿಯ ಇತಿಹಾಸ ಪುರುಷ ಶ್ರೀ ಬಸವೇಶ್ವರರ ಹೆಸರನ್ನು ಸೂಚಿಸಿದ್ದರೆಂದೂ ಮಹಾತ್ಮಾ ಗಾಂಧೀಜಿಯವರ ಹೆಸರು ಕೂಡಾ ಪ್ರಸ್ತಾಪಿತವಾಯಿತೆಂದೂ ಅಂತಿಮವಾಗಿ ಯಾವುದೇ ವಿವಾದಕ್ಕೆ ಕಾರಣವಾಗದ ರೀತಿಯಲ್ಲಿ ಕಾನೂನು ವಿಶ್ವವಿದ್ಯಾಲಯಕ್ಕೆ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಎಂಬ ಹೆಸರು ಅಂಗೀಕರಿಸಲ್ಪಟ್ಟಿತೆಂದು ಹೇಳಿದ್ದಾರೆ.

4. ಸರ್ ಸಿದ್ದಪ್ಪ ಕಂಬಳಿಯವರು ವಾಯವ್ಯ ಕರ್ನಾಟಕಕ್ಕೆ ನೀಡಿದ ಶೈಕ್ಷಣಿಕ ಕೊಡುಗೆ, ಅವರ ಮೇರು ವ್ಯಕ್ತಿತ್ವ ಮತ್ತು ಆದರ್ಶಗಳು ಸ್ಮರಣೀಯ ಮತ್ತು ಗೌರವ ಹುಟ್ಟಿಸುತ್ತವೆ. ಆದರೆ 2009ರಲ್ಲಿ ಡಾ. ಅಂಬೇಡ್ಕರ, ಶ್ರೀ ಬಸವೇಶ್ವರ ಮತ್ತು ಮಹತ್ಮಾ ಗಾಂಧೀಜಿಯವರುಗಳ ಹೆಸರುಗಳನ್ನು ಬದಿಗಿಟ್ಟು ವಿವಾದಾತೀತವಾಗಿ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಎಂದು ನಾಮಕರಣಗೊಂಡ ವಿಚಾರವನ್ನು ಉಲ್ಲೇಖಿತ ಪ್ರಸ್ತಾಪಕ್ಕೆ ಸಂಬಂಧಿಸಿದಂತೆ ಮರೆತರೆ ಆ ಮಹಾನ್ ವ್ಯಕ್ತಿಗಳಿಗೆ ಅಪಚಾರವಾಗಲಾರದೇ ಎಂಬ ಪ್ರಶ್ನೆಯು ಉದ್ಭವಿಸುತ್ತದೆ. ಒಂದು ವೇಳೆ ಇದು ವಿಸ್ತೃತ ವಿವಾದಕ್ಕೊಳಗಾದರೆ ಮುಜುಗರವಾಗುವ ಸಾಧ್ಯತೆಯೂ ಇದೆ. ಆದುದರಿಂದ ಭಾವನಾತ್ಮಕವಾಗಿ ಇರುವ ಈ ಸೂಕ್ಷ್ಮ ವಿಚಾರವನ್ನು ವಸ್ತು ನಿಷ್ಠವಾಗಿ ನೋಡಬೇಕಾದ ಅಗತ್ಯವಿದೆ.

5. ರಾಜ್ಯದ ಹೆಸರನ್ನು ವಿಶ್ವವಿದ್ಯಾಲಯಕ್ಕೆ ಇಡುವುದು ವ್ಯಾಪಕವಾಗಿ ಚಾಲ್ತಿಯಲ್ಲಿದೆ. ಕರ್ನಾಟಕ, ಕೇರಳ, ಆಂಧ್ರ, ದೆಹಲಿ, ರಾಜಸ್ತಾನ, ಗುಜರಾತ್, ನ್ಯೂಯಾರ್ಕ್, ಪೆನ್ಸಿಲ್ವೇನಿಯಾ, ವರ್ಜೀನಿಯ, ಮೇರಿಲ್ಯಾಂಡ್, ಕೋಲಂಬಿಯ, ಬ್ರಿಟಿಷ್ ಕೊಲಂಬಿಯಾ, ನ್ಯೂಸ್ ಸೌತವೇಲ್ಸ್ ಇತ್ಯಾದಿ ರಾಜ್ಯ ವಿಶ್ವವಿದ್ಯಾಲಯಗಳು ಸಂಬಂಧಪಟ್ಟ ರಾಜ್ಯಗಳ

ದ.ಪು.ತಿ...

ಹೆಸರನ್ನು ಹೊತ್ತಿವೆ. ನಿರ್ದಿಷ್ಟ ಸ್ಥಳಗಳಾದ ಓಕ್ಸಫರ್ಡ, ಕೇಂಬ್ರಿಜ್, ಹಾರ್ವರ್ಡ್, ಬನಾರಸ್, ಮೈಸೂರು, ಬೆಂಗಳೂರು, ಮಂಗಳೂರು – ಇತ್ಯಾದಿ ಹೆಸರುಗಳು ಕೂಡಾ ವಿಶ್ವವಿದ್ಯಾಲಯದೊಂದಿಗೆ ತಳುಕು ಹಾಕುತ್ತಿವೆ. ಆದರೆ ಇಡೀ ರಾಜ್ಯವನ್ನು ಪ್ರತಿನಿಧಿಸುವ ಹೆಸರು ಅಗತ್ಯವಿರುವಲ್ಲಿ ರಾಜ್ಯದ ಹೆಸರನ್ನು ಇಡಲಾಗುತ್ತದೆ. ವ್ಯಕ್ತಿಗತವಾದ ಹೆಸರು ಇಡುವುದರಿಂದ (ಉದಾರಣೆಗೆ ಅಜೀಜ್ ಪ್ರೇಮ್‌ಜೀ, ಎಸ್‌ಡಿಎಮ್, ಎಮ್‌ಎಸ್‌ರಾಮಯ್ಯ, ಖಾಜಾ ಬಂದೇ ನವಾಜ್ ಇತ್ಯಾದಿ) ಅದು ಖಾಸಗಿ ವಿಶ್ವವಿದ್ಯಾಲಯವೆ ಎಂಬ ಕಲ್ಪನೆಯೂ ಬರುವ ಸಾಧ್ಯತೆಯಿದೆ.

6. ಸರ್ ಸಿದ್ದಪ್ಪ ಕಂಬಳಿಯವರ ನೆನಪಿಗಾಗಿ ಅವರ ಜನ್ಮ ಮಾಸದಲ್ಲಿ ಅವರ ಹೆಸರಿನಲ್ಲಿ ದತ್ತಿ ಉಪನ್ಯಾಸವನ್ನು ಪ್ರತಿವರ್ಷ ನೇರವೇರಿಸುವುದು, ಅವರ ಹೆಸರಲ್ಲಿ ರ‍್ಯಾಂಕ್ ಪಡೆದ ವಿದ್ಯಾರ್ಥಿಗೆ ಸ್ವರ್ಣಪದಕ ನಿಧಿಯನ್ನು ಸ್ಥಾಪಿಸುವುದು ಮತ್ತು ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿ ವಿದ್ಯಾಥಿನಿಯರಿಗೆ ಶಿಷ್ಯವೇತನ ನೀಡುವುದು ಇತ್ಯಾದಿ ಕ್ರಮಗಳನ್ನು ಕೈಗೊಳ್ಳುವುದು ಅರ್ಥಪೂರ್ಣವಾಗುತ್ತದೆ. ಈ ದಿಸೆಯಲ್ಲಿ ಘನ ಸರಕಾರದ ಸೂಕ್ತ ಸೂಚನೆ ಮತ್ತು ನೆರವಿಗೆ ಕೋರಲಾಗಿದೆ.

ಮೇಲಿನ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಘನಸರಕಾರವು ಪ್ರಸ್ತಾಪಿತ ಮಹನೀಯರ ಹೆಸರನ್ನು "ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ" ಎಂಬುವುದಕ್ಕೆ ಬದಲಿಯಾಗಿ ಇಡುವ ವಿಚಾರವನ್ನು ಕೈಬಿಡಬೇಕೆಂದು ಮತ್ತು ಸರ್ ಸಿದ್ದಪ್ಪ ಕಂಬಳಿಯವರನ್ನು ಸ್ಮರಿಸುವ ಇತರ ಯಾವುದೇ ಕ್ರಮವನ್ನು ಕೈಗೊಳಬೇಕೆಂದು ವಿನಮ್ರವಾಗಿ ವಿನಂತಿಸಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

(ಪಿ. ಈಶ್ವರ ಭಟ್)